# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.16/2025

Pw-08

Cw-09

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀ ಚಂದ್ರಪ್ಪ ಗೋಣೆಪ್ಪನವರ |
| ತಂದೆ:ಗಂಡನ ಹೆಸರುಃ | ಶ್ರೀ ಭೀಮಪ್ಪ |
| ವಯಸ್ಸುಃ | 46 ವರ್ಷ |
| ಉದ್ಯೋಗಃ | ಖಾಸಗಿ ಕೆಲಸ |
| ವಾಸ ಸ್ಥಳಃ | ಕೋಡಿಯಾಲ-ಹೊಸಪೇಟೆ, ತಾಃ ರಾಣೇಬೆನ್ನೂರು |

**ದಿನಾಂಕ:22.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಚಾಸಾ-1 ಮತ್ತು 4 ನನ್ನ ಮಕ್ಕಳು. ಚಾಸಾ-8 ನನ್ನ ಹೆಂಡತಿ. ಆರೋಪಿತರು ನನಗೆ ಗೊತ್ತು. ನಾವು ಹಿಂದೂ ವಾಲ್ಮೀಕಿ ಜಾತಿಗೆ ಸೇರಿರುತ್ತೇವೆ. ಆರೋಪಿತರು ಹಿಂದೂ ಬಾರ್ಕಿ ಜಾತಿಗೆ ಸೇರಿರುತ್ತಾರೆ. ಈ ಘಟನೆ ನಡೆಯುವ 6 ತಿಂಗಳ ಹಿಂದೆ 1 ನೇ ಆರೋಪಿ ಮತ್ತು ನನ್ನ ಮಗಳು ಚಾಸಾ-4 ರವರ ನಡುವೆ ಹಿರೇಕೆರೂರಿನ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಮದುವೆಯಾಗಿತ್ತು. ಸದರಿ ವಿಚಾರ ನನಗೆ ಅವರಿಬ್ಬರ ಮದುವೆಯಾದ 3 ತಿಂಗಳ ಬಳಿಕ ಗೊತ್ತಾಯಿತು. ಆಗ ನಾನು ನನ್ನ ಮಗಳಿಗೆ ನೀನು 1 ನೇ ಆರೋಪಿ ಜೊತೆ ಮದುವೆಯಾಗಿದ್ದೀಯಾ, ಆದ ಕಾರಣ ನೀನು ಆತನ ಜೊತೆ ಹೋಗಿ ಮದುವೆ ಜೀವನ ನಡೆಸು ಎಂದು ಹೇಳಿದ್ದೆನು. ಅದಕ್ಕೆ ಚಾಸಾ-4 ರವರು ನಾನು 1 ನೇ ಆರೋಪಿ ಜೊತೆ ಹೋಗುವುದಿಲ್ಲ ಎಂದು ಹೇಳಿದಳು.

2. ಆಗ ನಾನು ಮತ್ತು ಹಿರಿಯರು ನನ್ನ ಮಗಳನ್ನು ಏಕೆ ಹೋಗುತ್ತಿಲ್ಲ ಎಂದು ಕೇಳಿದೆವು. ಆದರೆ ನನ್ನ ಮಗಳು ಚಾಸಾ-4 ರವರು ವಿವಾಹ ವಿಚ್ಛೇಧನಕ್ಕಾಗಿ ಅರ್ಜಿ ಹಾಕುತ್ತೇನೆಂದು ಹೇಳಿದಳು. ಆಗ ನಾನು, ನನ್ನ ಮಗಳು ಚಾಸಾ-4 ಮತ್ತು ಹೆಂಡತಿ ವಕೀಲರ ಹತ್ತಿರ ಹೋದೆವು. ಆಗ ವಕೀಲರು ಮದುವೆಯಾಗಿ ಇನ್ನೂ ಒಂದು ವರ್ಷ ಕಳೆದಿಲ್ಲ ಆದ

ಕಾರಣ ವಿವಾಹ ವಿಚ್ಛೇದನಕ್ಕೆ ಅರ್ಜಿ ಹಾಕಲು ಬರುವುದಿಲ್ಲ ಎಂದು ಹೇಳಿದರು. ಅಷ್ಟಕ್ಕೆ ನಾವು ಸುಮ್ಮನಾದೆವು.

3. ಈಗ್ಗೆ ಸುಮಾರು 06 ತಿಂಗಳ ಹಿಂದೆ ರಾತ್ರಿ 8.00 ಗಂಟೆ ಸಮಯದಲ್ಲಿ ನಾನು, ನನ್ನ ಹೆಂಡತಿ ಮತ್ತು ಚಾಸಾ–4 ರವರು ಕೂಡಿಕೊಂಡು ದುರ್ಗಮ್ಮ ದೇವಿ ದೇವಸ್ಥಾನಕ್ಕೆ ಹೋಗಿದ್ದೆವು. ಮನೆಯಲ್ಲಿದ್ದಂತಹ ನನ್ನ ಚಿಕ್ಕ ಮಗಳು ಚಾಸಾ–1 ರವರು ಫೋನ್ ಮಾಡಿ 1 ನೇ ಆರೋಪಿಯು ಮನೆಗೆ ಬಂದು ಚಪ್ಪಲಿಯಿಂದ ಆಕೆಗೆ ಹೊಡೆದು, ಹೊರಗಡೆ ರಸ್ತೆಗೆ ಎಳೆದುಕೊಂಡು ಬಂದು ನೀವು ಎಷ್ಟು ಜನ ಇದ್ದೀರಿ ತಳವಾರ ಮಿಂಡ್ರಿಗೆ ಹುಟ್ಟಿದವರು ಎಂದು ಹೇಳಿ ಹೊಡೆದರು ಎಂದು ಹೇಳಿದಳು. ಚಾಸಾ–1 ರವರು ಮುಂದುವರೆದು ಆಗ ನನ್ನ ತಂದೆ ಮತ್ತು ಚಾಸಾ–7 ಬಂದರು ಎಂದು ಮತ್ತು 1 ನೇ ಆರೋಪಿ ನನ್ನನ್ನು ಬಿಟ್ಟು ಓಡಿ ಹೋದನು ಎಂದು ನನಗೆ ಹೇಳಿದಳು.

4. ನಂತರ ನಾವು ದೇವಸ್ಥಾನದಿಂದ ಮನೆಗೆ ರಾತ್ರಿ 8.30 ಗಂಟೆಗೆ ವಾಪಸ್ ಬಂದೆವು. ನಂತರ ನಾನು, ನನ್ನ ಹೆಂಡತಿ ಮತ್ತು ಚಾಸಾ–1 ಪೊಲೀಸ್ ಠಾಣೆಗೆ ಹೊರಟಿದ್ದೆವು. ಆಗ ಮನೆಯಲ್ಲಿದ್ದಂತಹ ಚಾಸಾ–4 ರವರು ಫೋನ್ ಮಾಡಿ ಆರೋಪಿತರೆಲ್ಲರೂ ಬಂದು ಹೊರಗೆ ಎಳೆದುಕೊಂಡು ಬಂದು ಇಟ್ಟಿಗೆಯಿಂದ ನನ್ನ ಮೂಗಿ ಹೊಡೆದು, ಬಾಳ್ವೆ ಮಾಡಲು ಬಾ ಅಂದರೆ ಬರಲ್ಲ ಮಿಂಡ್ರಿ ಎಂದು ಬೈದರು ಎಂದು ಹೇಳಿದಳು. ನಂತರ ಸಿದ್ದಣ್ಣ ಓಲೇಕಾರ ಬಂದು ಜಗಳವನ್ನು ಬಿಡಿಸಿ ಕಳಿಸಿದರು ಎಂದು ನನ್ನ ಮಗಳು ನನಗೆ ಹೇಳಿದಳು. ನಂತರ ನಾವೆಲ್ಲರೂ ಮನೆಗೆ ವಾಪಸ್ ಬಂದು ಚಾಸಾ–1 ಮತ್ತು 4 ರವರನ್ನು ಹರಿಹರ ಆಸ್ಪತ್ರೆಗೆ ಕರೆದುಕೊಂಡು ಹೋದೆವು.

5. ನಂತರ ಕುಮಾರಪಟ್ಟಣಂ ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ನನ್ನ ಮಗಳು ಚಾಸಾ–1 ರವರ ಮೂಲಕ ದೂರನ್ನು ಕೊಡಿಸಿದ್ದೇನೆ. ನನ್ನ ಮಗಳ ಮೂಗಿಗೆ ತೊಂದರೆ ಇದ್ದ ಕಾರಣ ಆಕೆಯನ್ನು ದಾವಣಗೆರೆಯ ಸರ್ಕಾರಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಕರೆದುಕೊಂಡು ಹೋಗಿ ದಾಖಲುಮಾಡಿದೆವು. ಘಟನೆಯ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ 1 ರಿಂದ 7 ನೇ ಆರೋಪಿತರ ಪರವಾಗಿ ಶ್ರೀ ಪಿ.ಸಿ.ಬಿ. ವಕೀಲರಿಂದಃ**

6. ನಾನು ಕವಲೆತ್ತು ಗ್ರಾಮದಲ್ಲಿರುವ ಸಿಂಟೆಕ್ಸ ಕಂಪನಿಯಲ್ಲಿ ಕಾರ್ಮಿಕ ಎಂದು ಕೆಲಸ ಮಾಡುತ್ತೇನೆ. ನಾನು ಸದರಿ ಕಂಪನಿಯಲ್ಲಿ shift wise ಕೆಲಸ ಮಾಡುತ್ತೇನೆಂದರೆ ನಿಜ. ಘಟನೆ ನಡೆಯಿತು ಎನ್ನಲಾದ ದಿನ ನಾನು ಕೆಲಸಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ. ಘಟನೆ ನಡೆಯಿತು ಎನ್ನಲಾದ ದಿನ ಯಾವ ವಾರ ಇತ್ತು ಎಂದು ನನಗೆ ಈಗ ಹೇಳಲಾಗುವುದಿಲ್ಲ. ಅದೇ ರೀತಿ ತಾರೀಖು, ತಿಂಗಳು ಮತ್ತು ಇಸವಿಯನ್ನು ಸಹ ನನಗೆ ಹೇಳಲಾಗುವುದಿಲ್ಲ ಎಂದರೆ ನಿಜ.

7. 1 ನೇ ಆರೋಪಿ ಮತ್ತು ಚಾಸಾ–4 ನನ್ನ ಮಗಳು 3–4 ವರ್ಷಗಳಿಂದ ಪ್ರೀತಿ ಮಾಡಿ ಮದುವೆಯಾಗಿದ್ದರು ಎಂದರೆ ನಿಜ. 1 ನೇ ಆರೋಪಿ ಮತ್ತು ಚಾಸಾ–4 ರವರು 3–4 ವರ್ಷಗಳಿಂದ ಪ್ರೀತಿ ಮಾಡಿರುವ ವಿಚಾರ ನಮಗೆ ಗೊತ್ತಿತ್ತು ಎಂದರೆ ನಿಜ. ಈ ವಿಚಾರವಾಗಿ ನಮ್ಮ ಮನೆಯವರು ಮತ್ತು ಊರಿನ ಹಿರಿಯರು ಸೇರಿ ಹಲವಾರು ಬಾರಿ ಪಂಚಾಯತಿಯನ್ನು ಮಾಡಿದ್ದೆವು ಎಂದರೆ ನಿಜ. ನನ್ನ ಮಗಳು 1 ನೇ ಆರೋಪಿಯನ್ನು ಮದುವೆಯಾಗುವುದು ನಮಗೆ ಇಷ್ಟವಿಲ್ಲದೇ ಇದ್ದ ಕಾರಣ 1 ನೇ ಆರೋಪಿ ಮತ್ತು ಚಾಸಾ–4 ರವರು ಹೋಗಿ ನೋಂದಣಿ ಮದುವೆ ಮಾಡಿಕೊಂಡಿದ್ದಾರೆ ಎಂದರೆ ನಿಜ.

8. ನಂತರ ಅವರಿಬ್ಬರೂ ಕೂಡಿ ಸಂಸಾರ ಮಾಡಿಲ್ಲ ಎಂದರೆ ನಿಜ. ಚಾಸಾ–4 ಮತ್ತು 1 ನೇ ಆರೋಪಿ ಮದುವೆಯಾಗಿರುವ ವಿಚಾರ ನಮಗೆ 3–4 ತಿಂಗಳಾದ ಬಳಿಕ ಗೊತ್ತಾಯಿತು ಎಂದರೆ ನಿಜ. ನಾವು ನಮ್ಮ ಮಗಳನ್ನು ಕೇಳಿದಾಗ ಮದುವೆಯಾಗಿರುವುದನ್ನು ಬಿಟ್ಟರೆ ಎಂದೂ ಸಹ ನಾನು ಮತ್ತು 1 ನೇ ಆರೋಪಿ ವೈವಾಹಿಕ ಸಾಂಸಾರಿಕ ಜೀವನ ನಡೆಸಿಲ್ಲ ಎಂದು ಹೇಳಿದಳು ಎಂದರೆ ನಿಜ. ನನ್ನ ಮಗಳು ನಾನು 1 ನೇ ಆರೋಪಿ ಜೊತೆ ಮದುವೆಯಾಗಬಾರದಿತ್ತು ಮತ್ತು ನನಗೆ ಗಂಡ ಬೇಡಾ ಎಂದು ನಮಗೆ ಹೇಳಿದಳು ಎಂದರೆ ನಿಜ. ಅದಕ್ಕೆ ನಾನು ಮತ್ತು ನನ್ನ ಹೆಂಡತಿ ಹಾಗೂ ಚಾಸಾ–6 ರವರು ಸೇರಿ ಚಾಸಾ–4 ಮತ್ತು 1 ನೇ ಆರೋಪಿಗೆ ಗಲಾಟೆ ಮಾಡಿಕೊಳ್ಳದೇ ವಿವಾಹ ವಿಚ್ಛೇದನ ಪಡೆದುಕೊಳ್ಳಿ ಎಂದು ಹೇಳಿದೆವು ಎಂದರೆ ನಿಜ.

9. 1 ನೇ ಆರೋಪಿ ಮತ್ತು ಚಾಸಾ–4 ರವರು ವಿವಾಹ ವಿಚ್ಛೇದನ ಪಡೆದುಕೊಳ್ಳುವ ಸಲುವಾಗಿ ವಕೀಲರ ಹತ್ತಿರ ಅರ್ಜಿ ಹಾಕಲು ಹೋಗಿದ್ದರು ಎಂದರೆ ನಿಜ. ಆಗ ವಕೀಲರು ನೀವಿಬ್ಬರೂ ಮದುವೆಯಾಗಿ ಇನ್ನೂ ಒಂದು ವರ್ಷ ಸಹ ಆಗಿಲ್ಲ, ಆದ ಕಾರಣ 1 ವರ್ಷವಾದ ಬಳಿಕ ಬನ್ನಿ ಎಂದು ಅವರಿಬ್ಬರಿಗೆ ಹೇಳಿದರು ಎಂದರೆ ನಿಜ. ನಂತರ ಆರೋಪಿಗಳ ಮತ್ತು ನಮಗೆ ವಿವಾಹ ವಿಚ್ಛೇದನ ಸಲುವಾಗಿ ಯಾವುದೇ ಮಾತುಕತೆಯಾಗಿಲ್ಲ ಮತ್ತು ಯಾವತೂ ಸಹ ಭೇಟಿಯಾಗಿಲ್ಲ ಎಂದರೆ ನಿಜ.

10. 5–6 ತಿಂಗಳ ಬಳಿಕ ಕುಮಾರಪಟ್ಟಣಂ ಪೊಲೀಸರು 1 ನೇ ಆರೋಪಿಯನ್ನು, ಚಾಸಾ–4 ರವರನ್ನು ಹಾಗೂ ನಮ್ಮನ್ನು ಮತ್ತು ಊರಿನ ಹಿರಿಯರನ್ನು ಹಲವಾರು ಸಲ ಕರೆಯಿಸಿ ರಾಜೀ ಪಂಚಾಯತಿ ಮಾಡಿಸಿದ್ದರು ಎಂದರೆ ನಿಜ. ಆಗ ಅಲ್ಲಿ ಪೊಲೀಸರು ಮತ್ತು ಊರಿನ ಹಿರಿಯರು ಒಂದು ವರ್ಷ ಆದ ಬಳಿಕ ನೀವಿಬ್ಬರೂ ವಿವಾಹ ವಿಚ್ಛೇದನ ಮಾಡಿಕೊಳ್ಳಿ ಎಂದು 1 ನೇ ಆರೋಪಿ ಮತ್ತು ಚಾಸಾ–4 ರವರಿಗೆ ಹೇಳಿದ್ದರು ಎಂದರೆ ಸರಿಯಲ್ಲ.

11. ನನ್ನ ಮಗಳು ಚಾಸಾ–4 ಇವಳು 1 ನೇ ಆರೋಪಿ ವಿರುದ್ಧ ರಾಣೇಬೆನ್ನೂರಿನ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ವಿವಾಹ ವಿಚ್ಚೇದನ ಕೋರಿ ಅರ್ಜಿ ದಾಖಲು ಮಾಡಿದ್ದು, ಸದರಿ ಅರ್ಜಿ ವಿಚಾರಣೆ ಇನ್ನೂ ಸಹ ಬಾಕಿ ಇರುತ್ತದೆ ಎಂದರೆ ನಿಜ. 1 ನೇ ಆರೋಪಿ ಚಾಸಾ–4 ರವರಿಗೆ ವಿವಾಹ ವಿಚ್ಛೇಧನ ಕೊಟ್ಟರೆ ನಮ್ಮ ಮತ್ತು ಆರೋಪಿತರ ನಡುವೆ ಮುಂದೆ ಯಾವುದೇ ಸಂಬಂಧ ಉಳಿಯಬಾರದು ಎಂದು ಅಂದುಕೊಂಡಿದ್ದೆವು ಎಂದರೆ ನಿಜ. 1 ನೇ ಆರೋಪಿ ಮತ್ತು ಚಾಸಾ–4 ರವರ ನಡುವಿನ ವಿವಾಹ ವಿಚ್ಛೇದನಕ್ಕೆ ಈಗಲೂ ಸಹ ನನ್ನ ಒಪ್ಪಿಗೆ ಇರುತ್ತದೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ಮಗಳು ಚಾಸಾ–4 ರವರಿಗೆ ಒಪ್ಪಿಗೆ ಮೇರೆಗೆ ವಿವಾಹ ವಿಚ್ಛೇದನ ಕೊಡಲು ತಯಾರಿದ್ದಾನೆ, ಅದಕ್ಕೆ ನಮ್ಮ ಒಪ್ಪಿಗೆ ಇರುತ್ತದೆ ಎಂದರೆ ನಿಜ.

12. ಈಗ್ಗೆ 06 ತಿಂಗಳ ಹಿಂದೆ ನಾನು ಹೇಳುವ ಪ್ರಕಾರ ಯಾವುದೇ ಘಟನೆಯಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮಕ್ಕಳು ಪೋನಿನ ಮೂಲಕ ಗಲಾಟೆ ವಿಚಾರವನ್ನು ಹೇಳಿದರು ಎಂದು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಈ ಪ್ರಕರಣದ ಬಗ್ಗೆ ಎಂದೂ ಸಹ ವಿಚಾರಣೆ

ಮಾಡಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳನ್ನು ಬೇರೆ ಎಲ್ಲೂ ಸಹ ಹೇಳದೇ ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ನಿಜ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಆರೋಪಿತರಿಗೆ ತೊಂದರೆ ಕೊಡುವ ದುರುದ್ದೇಶದಿಂದ ಸುಳ್ಳು ದೂರು ಕೊಡಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.